ಉ) ಹಾಗಿದ್ದಲ್ಲಿ ಸೇಡಂ ಮತ ಕ್ಷೇತ್ರವನ್ನು ಬರಪೀಡಿತ ಪ್ರದೇಶವೆಂದು ಘೋಷಿಸುವ ವ್ಯವಸ್ಥೆ ಮಾಡಬಹುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಇಲ್ಲಾ. ಆದರೆ ಕರ್ನಾಟಕ ಭೂ ಕಂದಾಯ ನಿಯಮ 147 ರಡಿಯಲ್ಲಿ ನಿರ್ಧರಿಸಿದ ಸಾಲಿನ ಬೆಳೆಯ ಸರಾಸರಿ ಅಣಿವಾರಿಯನ್ನು ಮಾತ್ರ ಬೆಳೆ ಸಮೀಕ್ಷೆಗೆ ತೆಗೆದುಕೊಳ್ಳಲಾಗುತ್ತದೆ.

ಆ) ಮೇಲಿನ (ಅ) ಪ್ರಶ್ನೆಯ ಉತ್ತರದಂತೆ ಇದು ಉದ್ಭವಿಸುವುದಿಲ್ಲ.

ಇ) ಪ್ರತಿ ವರ್ಷವೂ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ಬೆಳೆಗೆ ಅಣಿವಾರಿ ನಿರ್ಧರಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಕಂದಾಯ ಇಲಾಖೆಯು ಇದನ್ನೇ ಭೂ ಕಂದಾಯ ಮನ್ನಾ ಅಥವಾ ಸ್ಥಗಿತಗೊಳಿಸುವ ಪ್ರಸ್ತಾವನೆಗಳಿಗೆ ಪರಿಗಣಿಸಬಹುದು.

ಈ) ಮೇಲಿನ (ಸಿ) ಪ್ರಶ್ನೆಯ ಉತ್ತರದಂತೆ ಇದು ಉದ್ಭವಿಸುವುದಿಲ್ಲ.

ಉ) ಅವಶ್ಯಕತೆಯಿಲ್ಲ.

ದಕ್ಷಿಣ ಕನ್ನಡದಲ್ಲಿರುವ ಬೀಡಿ ಕಾರ್ಮಿಕರ ಸಂಖ್ಯೆ.

533 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಬೀಡಿ ಮಾಲೀಕರು ಬೀಡಿ ಕಂಟ್ರಾಕ್ಟರರುಗಳು ಹಾಗೂ ಬೀಡಿ ಕಾರ್ಮಿಕರೆಷ್ಟು.

ಆ) ದಕ್ಷಿಣ ಕನ್ನಡದಲ್ಲಿ ಈ ಚಾಲ್ತಿಯಲ್ಲಿರುವ ಬೀಡಿ ಮಜೂರಿ ಎಷ್ಟು ಹಾಗೂ ಈಗಿರುವ ಮಜೂರಿಯನ್ನು ಹೆಚ್ಚಿಸಲು ಸರ್ಕಾರ ಯೋಚಿಸಿದೆಯೇ?

ಇ) ಬೀಡಿ ಮಜೂರರಿಗೆ ಈಗ ಇರುವ ಸವಲತ್ತುಗಳಾವುವು.

ಈ) ಬೀಡಿ ಮಜೂರರಿಗೆ ಮಾಲೀಕರಿಂದ, ಕಂಟ್ರಾಕ್ಟರುಗಳಿಂದ ಅನ್ಯಾಯಗಳೇನಾದರೂ ಆಗುತ್ತಿರುವ ಬಗ್ಗೆ ಮನವಿಗಳು ಬಂದಿದೆಯೇ? (ವಿವರಗಳನ್ನು ಒದಗಿಸುವುದು)

ಶ್ರೀ ಸಿ. ಎಸ್. ನಾಡಗೌಡ(ಕಾರ್ಮಿಕ ಸಚಿವರು)

ಅ)

1)	ಬೀಡಿ ಕಾರ್ಮಿಕರು	47
2)	ಬೀಡಿ ಕಂಟ್ರಾಕ್ಟರುಗಳು	2554
3)	ಬೀಡಿ ಕಾರ್ಮಿಕರು	2,21,587

ಆ) 1000 ಬೀಡಿ ಸುತ್ತಲೂ ರೂ.13.05 ಮತ್ತು ತುಟ್ಟಿ ಭತ್ಯೆ ರೂ. 5.16 ಕನಿಷ್ಠ ವೇತನವನ್ನು ಪರಿಷ್ಕರಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಸಂಬಳ ಸಹಿತ ರಜೆ, ಬೋನಸ್, ಹೆರಿಗೆ ಭತ್ಯೆ ರಜೆ,ವಸತಿ, ವೈದ್ಯಕೀಯ ಮತ್ತು ವಿದ್ಯಾರ್ಥಿವೇತನ ಸೌಲಭ್ಯಗಳು ಇತ್ಯಾದಿ.

ಈ) ಇಲ್ಲ.